## ಜನರ ಅಧ್ಯಯನ - ಸಂತ ಜೋಸೆಫ್ ಕಾಲೇಜು - ಬೆಂಗಳೂರು

## ಅಭಿಪ್ರಾಯ

---

ಸಂತ ಜೋಸೆಫರ ಕಲಾ ಹಾಗೂ ವಿಜ್ಞಾ ನ ಕಾಲೇಜು, ಬೆಂಗಳೂರು, ಹಾಗೂ ಜನರ ಅಧ್ಯಯನ ವಿಭಾಗ, ಲೊಯೊಲಾ ಕಾಲೇಜು, ಚೆನ್ನೈ, ಕೆಳಗಿನ ಅವಳಿ ಉದ್ದೇಶಗಳನ್ನು ಮನಸ್ಸಿನಲ್ಲಿಟ್ಟು ರಾಜ್ಯ ವ್ಯಾಪ್ತಿಯ ಸರ್ವೆಯನ್ನು ಕೈಗೊಂಡಿತು.
೧. ಜನರಿಗೆ, ಮುಕ್ತ ಮನಸ್ಸಿನಿಂದ ಅವರ ಅವಶ್ಯಕತೆ ಹಾಗೂ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಒಂದು ಅವಕಾಶ
೨. ರಾಜ್ಯದ ಪ್ರಸ್ತುತ ಸಾಮಾಜಿಕ   ರಾಜಕೀಯ ಪರಿಸ್ಥಿತಿಯ ಬಗ್ಗೆ ಇರುವ ಜನರ ವಿವಿಧ ಅಭಿಪ್ರಾಯಗಳನ್ನು ಒಟ್ಟುಮಾಡಲು.

### ವಿಧಾನ

ಈ ಒಂದು ಅಧ್ಯಯನವನ್ನು ೧೧.೦೧.೨೦೦೮ರಿಂದ ೨೦.೦೧.೨೦೦೮ರ ವರೆಗೆ ೨೪ ಜಿಲ್ಲೆಗಳಲ್ಲಿ ಮಾಡಲಾಯಿತು. ಒಟ್ಟು ೨೫೮೦ ಜನರನ್ನು, ೪೦% ನಗರವಾಸಿಗಳು ಹಾಗೂ ೬೦% ಗ್ರಾಮೀಣವಾಸಿಗಳು, ಇದರಲ್ಲಿ ಸಂದರ್ಶಿಸಲಾಯಿತು. ಜನರ ಅಧ್ಯಯನ ವಿಭಾಗದ ವಿಶಿಷ್ಟ ವಿಧಾನವಾಗಿರುವ ಸಾಮಾಜಿಕ-ಮನೋಶಾಸ್ತ್ರೀಯ ವಿಧಾನವನ್ನು ಬಳಸಲಾಯಿತು. ವಿಭಾಗದ ನಾಲ್ವರೊಂದಿಗೆ ಸುಮಾರು ೩೦ಕ್ಕಿಂತ ಹೆಚ್ಚು ಜನರು ವಿವಿಧ ಹಂತಗಳಲ್ಲಿ ಈ ಅಧ್ಯಯನದಲ್ಲಿ ಒಳಗೊಂಡಿದ್ದರು. ಪ್ರೊ. ಡಾ. ಎಸ್. ರಂಗರಾಜನ್, ನಿರ್ದೇಶಕರು, ಜನರ ಅಧ್ಯಯನ ವಿಭಾಗ, ಅವರು ಈ ಅಧ್ಯಯನದ ನಿರೂಪಕರು ಹಾಗೂ ಮಾರ್ಗದರ್ಶಿಗಳಗಿದ್ದರು.

### ಪ್ರತಿಸ್ಪಂದಿಸಿದವರ ಹಿನ್ನಲೆ

ಈ ಮಾದರಿ, ಸಮಾನ ಸಂಖ್ಯೆಯ ಪುರುಷರನ್ನು ಹಾಗೂ ಮಹಿಳೆಯರನ್ನು ಒಳಗೊಂಡಿದೆ. ವಯಸ್ಸಿಗೆ ಅನುಸಾರವಾಗಿ, ಬಹುಸಂಖ್ಯಾ ಪ್ರತಿಸ್ಪಂದಿಗಳು(೩೪.೨%) ೨೬-೩೫ರ ಗುಂಪಿನವರಾಗಿದ್ದು, ನಂತರ (೨೮.೧%) ೩೬-೪೫ರ ಗುಂಪು), ೪೬-೬೦ರ ಗುಂಪು(೨೦.೩%), ಕೆಳಗಿನ ವಯಸ್ಸಿನವರು (೧೨.೫%), ಮತ್ತು ಒಳಿದವರು ೬೦ಕ್ಕಿಂತ ಮೇಲ್ಪಟ್ಟವರಾಗಿದ್ದರು. ವಿದ್ಯಾಭ್ಯಾಸಕ್ಕನುಸಾರವಾಗಿ, ೨೭.೮% ಅನಕ್ಷರಸ್ಥರು ಅಥವಾ ಅಲ್ಪ ವಿದ್ಯಾಭ್ಯಾಸ ಹೊಂದಿದವರು (೫ನೇ ತರಗತಿತನಕ), ೩೬.೯% ೬ರಿಂದ ೧೦ನೇ ತರಗತಿ, ೧೪.೨% ಪದವಿ ಪೂರ್ವ ಕಾಲೇಜು ಮಟ್ಟ, ೧೭.೯% ಕಾಲೇಜು ಮಟ್ಟ(ಕಲಾ ಮತ್ತು ವಿಜ್ಞಾನ), ಹಾಗೂ ಉಳಿದವರು ಉನ್ನತ ವಿದ್ಯಾಭ್ಯಾಸವನ್ನು ಮಾಡಿದವರಾಗಿದ್ದರು. ಧರ್ಮಕ್ಕನುಸಾರವಾಗಿ, ಹಿಂದು ೮೩.೫%, ಮುಸ್ಲಿಂ   ೧೧.೧%, ಮತ್ತು ಕ್ರೈಸ್ತರು   ೧.೩%, (ಒಳಿದವರು ಬೇರೆ ಧರ್ಮಗಳಿಗೆ ಸೇರಿದವರು). ಅನೇಕ ಜಾತಿಗಳಲ್ಲಿ ಕೆಳಕಂಡವರು ಬಹುಸಂಖ್ಯೆಯಲ್ಲಿದ್ದರು; ಪ್.ಜಾತಿ/ಪಂಗಡ- ೧೯.೭%, ಲಿಂಗಾಯತರು ೧೩೪.೮%, ವಕ್ಕಲಿಗರು- ೧೨.೭%, ಬ್ರಾಹ್ಮನರು-೭.೨%, ಒಕ್ಕಲಿಗರು-೨.೯%, ಕುರುಬರು-೧.೨%, ಮತ್ತು ಕ್ಷತ್ರಿಯರು-೧.೦%. ಈ ಮಾದರಿ ೯.೫% ನವ ಮತದಾರರನ್ನು ಹೊಂದಿರುತ್ತದೆ.(ಮುಂದಿನ ಚುನಾವಣೆಯಲ್ಲಿ ಮೊದಲನೆ ಬಾರಿಗೆ ಮತ ಚಲಾಯಿಸುವಂತವರು)

### ಮಾಹಿತಿ

**೦೧. ಅವಶ್ಯಕತೆಗಳು/ ಸಮಶ್ಯೆಗಳು**

ಕುಡಿಯುವ ನೀರಿನ ಸಮಸ್ಸೆ ಸ್ಥಳೀಯ(ಹಳ್ಳಿ/ಪಟ್ಟಣ) ಸಮಸ್ಸೆಗಳಲ್ಲಿ(೩೬.೯%) ಮೊದಲನೆಯದಾಗಿದೆ. ಬೇರೆ ಸಮಸ್ಸೆಗಳು ಅಥವಾ ಅವಶ್ಯಕತೆಗಳು: ಶೌಚಾಲಯದ ಸೌಲಭ್ಯ-೧೫.೨%, ಸಾರಿಗೆ-೧೦.೩%, ವೈದ್ಯಕೀಯ ಸೌಲಭ್ಯ-೯.೮%, ರೇಶನ್ ಪೂರೈಕೆ-೭.೦%, ಹಾಗೂ ರೈತರಿಇಗೆ ಸಾಲ-೫.೪%.

ರಾಜ್ಯ ಮಟ್ಟದಲ್ಲಿ, ನಿರುದ್ಯೋಗವು ಮೊದಲನೆಯ ಸ್ಥಾನದಲ್ಲಿದೆ(೪೬.೦%). ನಂತರದ ಸಮಸ್ಯೆಗಳು; ಎಲ್ಲಾ ಹಂತಗಳಲ್ಲಿ ಭ್ರಷ್ಟಚಾರ-೧೪.೩%, ಕೃಷಿಗೆ ಬೆಂಬಲದ ಕೊರತೆ-೧೨.೦%, ಹಣದುಬ್ಬರ-೧೦.೮%, ನಮ್ಮ ಜನರಿಗೆ ಉದ್ಯೋಗದಲ್ಲಿ ಆದ್ಯತೆ ಇಲ್ಲದಿರುವುದು-೫.೪%, ಹಾಗೂ ತಮಿಳುನಾಡಿನ ಜೊತೆ ನೀರಿನ ಸಮಸ್ಸೆ-೪.೨%.

## ೦೨. ಪಕ್ಷಗಳ ಸಾಧನೆ

ಕಳೆದ ಮೂರು ವರ್ಷಗಳಲ್ಲಿ ವಿವಿಧ ರಾಜಕೀಯ ಪಕ್ಷಗಳ ಸಾಧನೆಯನ್ನು ಅವಲೋಕಿಸಿದಾಗ ಬಿ.ಜೆ.ಪಿ. ಉಳಿದ ಎರಡು ಮುಖ್ಯ ಪಕ್ಷಗಳಿಗಿಂತ ಹೆಚ್ಚು ಮನ್ನಣೆಯನ್ನು ಗಳಿಸಿದೆ.

| ಪಕ್ಷ | ಉತ್ತಮ | ಪರವಾಗಿಲ್ಲ | ಚೆನ್ನಾಗಿಲ್ಲ |
|---|---|---|---|
| ಬಿ.ಜೆ.ಪಿ | ೪೬.೯ | ೨೫.೬ | ೨೭.೫ |
| ಕಾಂಗ್ರೆಸ್ | ೩೪.೮ | ೨೯.೬ | ೩೫.೬ |
| ಜೆ.ಡಿ (ಎಸ್) | ೩೦.೮ | ೩೧.೩ | ೩೭.೯ |

## ೦.೩ ವಿಧಾನಸಭಾ ಸದಸ್ಯರ ಸಾಧನೆ

ತಮ್ಮ ವಿಧಾನಸಭಾ ಕ್ಷೇತ್ರಗಳಲ್ಲಿ ಸದಸ್ಯರ ಸಾಧನೆ ಬಗ್ಗೆ ೩೯.೨% ಜನರು ತೃಪ್ತಿಯನ್ನು ವ್ಯಕ್ತಪಡಿಸಿದರೆ ಸರಿಸುಮಾರು ೩೯.೦% ಜನರು ನಿರಾಶೆಯನ್ನು ವ್ಯಕ್ತಪಡಿಸಿದರು.

ಅದೇ ರೀತಿ, ಈಗಿನ ಸದಸ್ಯರು ಮುಂದಿನ ಚುನಾವಣೆಗೆ ನಿಂತಲ್ಲಿ ಅವರಿಗೆ ಮತದಾನ ಮಾಡುವ ವಿಷಯದಲ್ಲೂ ಅಭಿಪ್ರಾಯಗಳು ಭಿನ್ನವಾಗಿವೆ. ೫೧.೨% ಜನರು ಸಕರಾತ್ಮಕವಾಗಿ ಉತ್ತರ ಕೊಟ್ಟರೆ ಉಳಿದವರ ಉತ್ತರ ನಕರಾತ್ಮಕವಾಗಿತ್ತು.

## ೦೪. ಇಂದು ಮತದಾನ

ಇವತ್ತು ಮತದಾನವಿದ್ದಲ್ಲಿ ಬಹುಸಂಖ್ಯೆಯ ಮತದಾರರು ಬಿಜೆಪಿಯನ್ನು ಆರಿಸಲಿದ್ದು, ನಂತರ ಕಾಂಗ್ರೆಸ್ ಹಾಗೂ ಜೆಡಿ(ಎಸ್) ಇವೆ.

| ಪಕ್ಷ | ಮತ ಹಂಚಿಕೆ |
|---|---|
| ಬಿಜೆಪಿ | ೪೦.೦ |

| | |
|---|---|
| ಕಾಂಗ್ರೆಸ್ | ೨೫.೮ |
| ಜೆಡಿ(ಎಸ್) | ೧೦.೭ |
| ಇತರರು | ೧.೫ |
| ನಿರ್ಧರಿಸಿಲ್ಲ/ಪ್ರತಿಸ್ಪಂದಿಸಿಲ್ಲ | ೨೨.೦ |

ಅಧ್ಯಯನದ ಸಮಯದಲ್ಲಿ ಸಂಶೋಧನ ತಂಡವು ಈ ಕೆಳಗಿನ ಎರಡು ಅಂಶಗಳನ್ನು ಗಮನಿಸಿದೆ.

೧. ಬಿಜೆಪಿ ಮೇಲೆ ಎಲ್ಲಾ ಕಡೆ ಕರುಣೆಯು ಎದ್ದು ಕಾಣುತ್ತದೆ ಹಾಗೂ ಬಿಜೆಪಿಗೆ ಒಂದು ಅವಕಾಶ ಯಾಕೆ ನೀಡಬಾರದು ಎಂಬ ಅಭಿಪ್ರಾಯ ಮೂಡಿ ಬಂದಿದೆ.

೨. ಅದೇ ಸಮಯಕ್ಕೆ, ಯಾವ ಪಕ್ಷಕ್ಕೆ ಮತದಾನ ಮಾಡುವೆ ಎಂಬುವುದರ ಬಗ್ಗೆ ಬಹಿರಂಗವಾಗಿ ಹೇಳಲು, ಸಾಮಾಜಿಕರಲ್ಲಿ ವ್ಯಕ್ತಪಡಿಸದಂತಹ ಅಂಜಿಕೆ, ಭಯ ಎದ್ದು ಕಾಣುತ್ತದೆ. ಮುಖ್ಯವಾಗಿ ಬಿಜೆಪಿ ಬಿಟ್ಟು ಬೇರೆ ಪಕ್ಷಗಳ ಕುರಿತು. ಅದು ಬಹುಸಂಖ್ಯೆಯ ನಿರ್ಧರಿಸದ ಮತದಾರರ ಬಗ್ಗೆ ಸೂಚಿಸುತ್ತದೆ.

**೦೫. ಲಿಂಗಕ್ಕನುಸಾರವಾಗಿ ಮತದಾನ**

ಪುರುಷರು ಬೇರೆ ಪಕ್ಷಗಳಿಗಿಂತ ಬಿಜೆಪಿಯನ್ನು ಆರಿಸಿದರೆ, ಮಹಿಳೆಯರು ಕಾಂಗ್ರೆಸ್ಸನ್ನು ಒಪ್ಪಿಕೊಂಡಿದ್ದಾರೆ.

| | ಬಿಜೆಪಿ | ಕಾಂಗ್ರೆಸ್ಸ್ | ಜೆಡಿ(ಎಸ್) |
|---|---|---|---|
| ಪುರುಷರು | ೫೭.೧ | ೨೧.೧ | ೧೪.೧ |
| ಮಹಿಳೆಯರು | ೩೭.೦ | ೪೦.೭ | ೧೧.೧ |

**೦೬. ವಯಸ್ಸಿಗೆ ಅನುಸಾರವಾಗಿ ಮತದಾನ**

ಕಾಂಗ್ರೆಸ್ ಅತ್ಯಂತ ಯುವ ಮತದಾರರ(೨೫ಕ್ಕಿಂತ ಕಡಿಮೆ ವಯಸ್ಸು) ಬಹಳ ಬೆಂಬಲವನ್ನು ಹಾಗೂ ೩೬-೪೫ ವಯಸ್ಸಿನವರ ಸಾಧಾರಣ ಬೆಂಬಲವನ್ನು ಹೊಂದಿದೆ. ೨೬-೩೫, ೪೬-೬೦ ಹಾಗೂ ೬೦ಕ್ಕಿಂತ ಮೇಲ್ಪಟ್ಟವರ ನಡುವೆ ಬಿಜೆಪಿ ಮೆಚ್ಚುಗೆಯ ಪಕ್ಷವಾಗಿದೆ. ವಯಸ್ಸು ಏರಿದಂತೆ ಜೆಡಿ(ಎಸ್)ಗೆ ಬೆಂಬಲ ಏರುತ್ತದೆ.

| | ಬಿಜೆಪಿ | ಕಾಂಗ್ರೆಸ್ಸ್ | ಜೆಡಿ(ಎಸ್) |
|---|---|---|---|
| ೨೫ಕ್ಕಿಂತ ಕಡಿಮೆ | ೨೩.೮ | ೭೩.೩ | ೧.೯ |
| ೨೬-೩೫ | ೬೦.೮ | ೧೧.೮ | ೯.೯ |
| ೩೬-೪೫ | ೩೩.೯ | ೪೩.೪ | ೧೬.೯ |

| | | | |
|---|---|---|---|
| ೪೬-೬೦ | ೫೬.೩ | ೧೮.೩ | ೨೦.೪ |
| ೬೦ಕ್ಕಿಂತ ಮೇಲ್ಪಟ್ಟವರು | ೫೦.೦ | ೩೦.೦ | ೧೫.೦ |

### ೦೭. ವಿದ್ಯಾಭ್ಯಾಸಕ್ಕನುಸಾರವಾಗಿ ಮತದಾನ

| | ಬಜೆಪಿ | ಕಾಂಗ್ರೆಸ್ಸ್ | ಜೆಡಿ(ಎಸ್) |
|---|---|---|---|
| ಅನಕ್ಷರಸ್ಥರು/ಅಲ್ಪ ವಿದ್ಯಾಭ್ಯಾಸ | ೩೦.೭ | ೪೦.೦ | ೨೭.೩ |
| ೬ರಿಂದ ಪದವಿಪೂರ್ವ | ೫೫.೫ | ೨೮.೫ | ೭.೯ |
| ಪದವಿ ಮೇಲೆ | ೩೯.೧ | ೨೫.೪ | ೧೩.೦ |

### ೦೮. ಉದ್ಯೋಗಕ್ಕನುಸಾರವಾಗಿ ಮತದಾನ

| | ಬಜೆಪಿ | ಕಾಂಗ್ರೆಸ್ಸ್ | ಜೆಡಿ(ಎಸ್) |
|---|---|---|---|
| ಕೂಲಿ/ಕೃಷಿ | ೩೫.೮ | ೩೫.೧ | ೧೫.೨ |
| ಸ್ವ-ಉದ್ಯೋಗ | ೪೧.೯ | ೩೨.೧ | ೧೨.೩ |
| ಖಾಸಗಿ ವೇತನ | ೫೮.೩ | ೧೩.೬ | ೨೨.೩ |
| ಸರ್ಕಾರಿ ನೌಕರರು | ೪೧.೭ | ೨೫.೦ | ೨೫.೦ |

### ೦೯. ಧರ್ಮಕ್ಕನುಸಾರವಾಗಿ ಮತದಾನ

| | ಬಜೆಪಿ | ಕಾಂಗ್ರೆಸ್ಸ್ | ಜೆಡಿ(ಎಸ್) |
|---|---|---|---|
| ಹಿಂದು | ೫೦.೩ | ೩೦.೭ | ೧೨.೬ |
| ಮುಸ್ಲಿಂ | ೨೧.೭ | ೪೨.೨ | ೧೫.೭ |
| ಕ್ರೈಸ್ತ | ೨೫.೦ | ೫೦.೦ | ೨೫.೦ |

### ೧೦. ಜಾತಿಗನುಸಾರವಾಗಿ ಮತದಾನ

| | ಬಜೆಪಿ | ಕಾಂಗ್ರೆಸ್ಸ್ | ಜೆಡಿ(ಎಸ್) |
|---|---|---|---|

| | | | |
|---|---|---|---|
| ಪರಿಶಿಷ್ಟ ಜಾತಿ/ಪಂಗಡ | ೪೦.೯ | ೪೨.೪ | ೧೫.೯ |
| ಬೇರೆ ಜಾತಿ | ೪೩.೫ | ೩೭.೭ | ೧೫.೯ |
| ವಕ್ಕಲಿಗರು | ೪೧.೪ | ೩೯.೧ | ೧೩.೮ |
| ಲಿಂಗಾಯತರು | ೬೩.೩ | ೨೯.೪ | ೫.೫ |
| ಕುರುಬರು | ೩೭.೫ | ೫೦.೦ | ೧೨.೫ |
| ಒಕ್ಕಲಿಗರು | ೩೩.೩ | ೩೩.೩ | ೨೫.೦ |
| ಕ್ಷತ್ರಿಯರು | ೧೬.೭ | ೧೬.೭ | ೩೩.೩ |

**೧೧. ನವ ಮತದಾರರು**

ಬಹುಸಂಖ್ಯೆಯಲ್ಲಿ ಯುವಮತದಾರರು ಕಾಂಗ್ರೆಸ್ಸಿಗೆ ಮತದಾನ ಮಾಡುವ ಇಚ್ಛೆ ತೋರಿಸಿದ್ದು, ನವಮತದಾರರು ಈ ಪಕ್ಷಕ್ಕೆ ಒಲವು ತೋರಿಸುವುದು ಸ್ಪಷ್ಟವಾಗಿದೆ.

| | ಬಿಜೆಪಿ | ಕಾಂಗ್ರೆಸ್ಸ್ | ಜೆಡಿ(ಎಸ್) |
|---|---|---|---|
| ನವ ಮತದಾರರು | ೧೮.೯ | ೭೮.೪ | ೧.೪ |
| ಹಳೆಯ ಮತದಾರರು | ೫೦.೦ | ೨೫.೬ | ೧೩.೮ |

**೧೨. ೨೦೦೪ರ ಮತದಾನ ಹಾಗೂ ೨೦೦೮**

ಮತ್ತೊಂದು ಮುಖ್ಯವಾದ ವಿಷಯವೆಂದರೆ ಕಳೆದ ಸಲ ೨೦೦೪ರಲ್ಲಿ ಮತದಾನ ಮಾಡಿದವರಲ್ಲಿ ಎಲ್ಲರೂ ಅದೇ ಪಕ್ಷಕ್ಕೆ ಮತದಾನ ಮಾಡುವುದು ಕಂಡುಬರುವುದಿಲ್ಲ. ಕೆಳಗಿನ ಪಟ್ಟಿ ಕಳೆದ ಸಲ ಉಳಿದ ಪಕ್ಷಕ್ಕೆ ಮತದಾನ ಮಾಡಿದವರಿಗಿಂತ ಬಿಜೆಪಿಗೆ ಮತದಾನ ಮಾಡಿದವರಲ್ಲಿ ಹೆಚ್ಚಿನವರು ಅದಕ್ಕೆ ಬದ್ಧರಾಗಿದ್ದನ್ನು ತೋರಿಸುತ್ತದೆ.

| ೨೦೦೪ರಲ್ಲಿ ಮತದಾನ ಮಾಡಿದ ಪಕ್ಷ | ಬಿಜೆಪಿ | ಕಾಂಗ್ರೆಸ್ಸ್ | ಜೆಡಿ(ಎಸ್) |
|---|---|---|---|
| ಬಿಜೆಪಿ | ೭೮.೧ | ೯.೩ | ೩.೬ |
| ಕಾಂಗ್ರೆಸ್ಸ್ | ೨೪.೩ | ೫೯.೪ | ೧೩.೪ |
| ಜೆಡಿ(ಎಸ್) | ೩೩.೩ | ೭.೧ | ೪೧.೪ |

**೧೩. ಸರ್ಕಾರದ ರಚನೆ**

ಬಹಳ ಮಂದಿ ಪ್ರತಿಸ್ಪಂದಿಗಳು ಮುಂದಿನ ಚುನಾವಣೆಯಲ್ಲಿ  ಏಕಪಕ್ಷ ಬಹುಮತದೊಂದಿಗೆ ಸರ್ಕಾರವನ್ನು ರಚಿಸಲಿದೆ ಎಂದು ಭಾವಿಸಿದ್ದಾರೆ.

| | |
|---|---|
| ಏಕಪಕ್ಷ ಸ್ವಂತ ಬಹುಮತದೊಂದಿಗೆ | ೬೨.೦ |
| ಮೈತ್ರಿಕೂಟ ಸರ್ಕಾರ | ೨೫.೦ |
| ಏಕಪಕ್ಷ ಬಹ್ಯ ಬೆಂಬಲದೊದಿಗೆ | ೧೩.೦ |

ಏಕಪಕ್ಷ ಸ್ವಂತ ಬಹುಮತದೊಂದಿಗೆ  ಸರ್ಕಾರ ರಚಿಸುವ ಅಭಿಪ್ರಾಯವನ್ನು ವ್ಯಕ್ತಪಡಿಸಿರುವವರಲ್ಲಿ , ಬಹುಮಂದಿ ಆ ಪಕ್ಷ ಬಿಜೆಪಿಯಾಗಿರಬಹುದು ಎಂದು ಬಾವಿಸಿರುತ್ತರೆ.

[ಬಿಜೆಪಿ- ೬೭.೧, ಕಾಂಗ್ರೆಸ್-೨೪.೧, ಜೆಡಿ(ಎಸ್)-೮.೮]

**೧೪. ಮುಂದಿನ ಮುಖ್ಯಮಂತ್ರಿ**

ಕೆಳಗಿನವರು ಪಟ್ಟಿಯಲ್ಲಿ ಮೊದಲನೆಯ ೫ ಸ್ಥಾನಗಳನ್ನು ಪಡೆದಿರುವ ಅರ್ಹತೆ ಹಾಗೂ ಅವಕಾಶವಿರುವ ಮುಖ್ಯಮಂತ್ರಿ ಅಭ್ಯರ್ಥಿಗಳು

| | ಹೆಚ್ಚಿನ ಅರ್ಹತೆ | ಹೆಚ್ಚಿನ ಅವಕಾಶ |
|---|---|---|
| ಯೆಡಿಯೂರಪ್ಪ | ೪೫.೧ | ೪೯.೧ |
| ಕುಮಾರಸ್ವಾಮಿ | ೨೫.೮ | ೩೭.೬ |
| ಎಸ್. ಎಂ. ಕೃಷ್ಣ | ೧೩.೧ | ೫.೭ |
| ಧರಮ್ ಸಿಂಗ್ | ೯.೭ | ೪.೩ |
| ಸಿದ್ದರಾಮಯ್ಯ | ೩.೭ | ೧.೧ |

**೧೫.** ಮೇಲಿನ ವಿವಿಧ ಅಂಶಗಳನ್ನು ವಿಶ್ಲೇಷಿಸಿ, ಒಟ್ಟಾಗಿ ಹೇಳುವುದಾದರೆ ಪ್ರಸ್ತುತ ರಾಜಕೀಯ ವಾತಾವರಣ ಬಿಜೆಪಿ ಪರವಾಗಿರುವುದು ಎದ್ದು ಕಾಣುತ್ತದೆ. ಈ ಪರಿಸ್ಥಿತಿ ಕಾಂಗ್ರೆಸ್ಸಿನ ಕೆಲವೊಂದು ನಿರ್ಧಾರ ಹಾಗೂ ಯೋಜನೆಗಳಿಗನುಸಾರವಾಗಿ ಒಬ್ಬ ಹೆಚ್ಚಿನ ಅಭಿವ್ಯಕ್ತಿಯ ವ್ಯಕ್ತಿಯನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸುವುದರಿಂದ ಹಾಗೂ ಬೇರೆ ಪಕ್ಷಗಳಿಂದ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಮೂಲಕ ಬದಲಾಗುವ ಸಾಧ್ಯತೆಗಳಿವೆ.

ಪ್ರೊ. ಡಾ. ಎಸ್. ರಾಜನಾಯಕಂ ಹಾಗೂ ತಂಡ

೦೨ ಫೆಬ್ರವರಿ ೨೦೦೮-೦೧-೩೧

**ಸೂಚನೆ:** (೧) ಮೇಲೆ ಪಟ್ಟಿಗಳಲ್ಲಿ ತಿಳಿಸಿರುವ ಸಂಖ್ಯೆಗಳು, ಸೂಚಿಸದೆ ಇದ್ದಲ್ಲಿ ಶೇಕಡಾವಾರನ್ನು ಸೂಚಿಸುತ್ತವೆ.

(೨) ಕೇವಲ ಮುಖ್ಯ ಪಕ್ಷಗಳ ಅಂಕಿಅಂಶಗಳನ್ನು ವಿಶ್ಲೇಷಣೆಗೆ ತೆಗೆದುಕೊಂಡಿರುವುದರಿಂದ ಒಟ್ಟು ಮೊತ್ತವು ೧೦೦ ಪ್ರತಿಶತವಾಗಿರದೆ ಇರಬಹುದು.

**ನಮಗೆ ಈ ಒಂದು ಅಧ್ಯಯನ ನಡೆಸಲು ಸಹಾಯ ಮಾಡಿದ ಪ್ರತಿಯೊಬ್ಬರಿಗೂ, ಮುಖ್ಯವಾಗಿ ರಾಜ್ಯದಲ್ಲಿ ಅಂಕಿಅಂಶಗಳನ್ನು ಸಂಗ್ರಹಿಸಲು ಸಹಾಯ ಮಾಡಿದ ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು.**